# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 01. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1015 |
| 02. | ಸದಸ್ಯರ ಹೆಸರು | : | ಶ್ರೀ ಆಯನೂರು ಮಂಜುನಾಥ್ (ಪದವೀಧರ ಕ್ಷೇತ್ರ) |
| 03. | ಉತ್ತರಿಸುವ ದಿನಾಂಕ | : | 22.09.2022 |
| 04. | ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಬಾರಿಯ ಅಧಿವೇಶನದ ಸಂದರ್ಭದಲ್ಲಿ 2011-12ನೇ ಸಾಲಿನಲ್ಲಿ 750 ಐ.ಆರ್.ಬಿ ಕಾನ್ಸ್‌ಟೇಬಲ್ ನೇಮಕಾತಿ ಕುರಿತಂತೆ ಸರ್ಕಾರವು ನೀಡಿದ್ದ ಭರವಸೆಯನ್ನು ಅನುಷ್ಠಾನಗೊಳಿಸಲಾಗಿದೆಯೇ; ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು; (ವಿವರವಾದ ಮಾಹಿತಿ ನೀಡುವುದು) | 2011-12ನೇ ಸಾಲಿನಲ್ಲಿ 750 ಐ.ಆರ್.ಬಿ ಕಾನ್ಸ್‌ಟೇಬಲ್ ನೇಮಕಾತಿ ಕುರಿತಂತೆ ಸರ್ಕಾರವು ನೀಡಿದ್ದ ಭರವಸೆಯನ್ನು ಅನುಷ್ಠಾನಗೊಳಿಸಲು ದಿನಾಂಕ:22.03.2022ರ ಗೃಹ ಇಲಾಖೆಯ ಉನ್ನತ ಅಧಿಕಾರಿಗಳ ಸಭೆಯಲ್ಲಿ ಸದ್ದುದ್ದೇಶದಿಂದ ಹಾಗೂ ಅಧಿಸೂಚನೆಯಲ್ಲಿನ ಎಲ್ಲಾ ಹುದ್ದೆಗಳು ಭರ್ತಿಯಾಗಲೀ ಎಂಬ ಆಶಯದಿಂದ ನೇಮಕಾತಿ ಕಛೇರಿಯ ಆದೇಶದಂತೆ ಹೆಚ್ಚುವರಿಯಾಗಿ ಕರೆ ಕಳುಹಿಸಿದ 488 ಅಭ್ಯರ್ಥಿಗಳ ಪೈಕಿ ನೇಮಕಾತಿ ಆದೇಶ ಪಡೆದು ಕರ್ತವ್ಯ ನಿರ್ವಹಿಸುತ್ತಿರುವ ಅಭ್ಯರ್ಥಿಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ಅಭ್ಯರ್ಥಿಗಳಿಗೆ ಸಂವಿಧಾನದ ಆಶಯ ಹಾಗೂ ಮಾನವೀಯ ನೆಲೆಯಲ್ಲಿ ಒಂದು ಬಾರಿಯ ಕ್ರಮವಾಗಿ ಎಲ್ಲಾ ಪರೀಕ್ಷೆಯಲ್ಲಿ ತೇರ್ಗಡೆ ಆದ, ಎಲ್ಲಾ ಮೂಲ ದಾಖಲೆಗಳು ಸಮರ್ಪಕವಾಗಿದೆ ಎಂದು ಕಂಡು ಬಂದಿರುವ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸಿ ನೇಮಕಾತಿ ಕಛೇರಿಯು ಈಗಾಗಲೇ ನೀಡಿರುವ ನಿರ್ದೇಶನದಂತೆ 488 ಅಭ್ಯರ್ಥಿಗಳಲ್ಲಿ 111 ಅಭ್ಯರ್ಥಿಗಳನ್ನು ನೇಮಕಗೊಳಿಸಲು ಕೈಗೊಂಡ ಪ್ರಕ್ರಿಯೆಯನ್ನೇ ಮುಂದುವರೆಸಿ ಒಂದು ಬಾರಿಯ ಕ್ರಮವಾಗಿ ಬಾಕಿ ಉಳಿದಿರುವ ಅಭ್ಯರ್ಥಿಗಳಿಗೆ ಅಂತಿಮ ಅವಕಾಶವನ್ನು ನೀಡುವ ಷರತ್ತಿಗೊಳಪಟ್ಟು ನಿಯಮಾನುಸಾರ ಪರಿಶೀಲಿಸಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಇಲಾಖಾ ಮುಖ್ಯಸ್ಥರಿಗೆ ಸೂಚಿಸಲಾಗಿರುತ್ತದೆ.<br><br>ಸರ್ಕಾರದ ನಿರ್ದೇಶನದಂತೆ ಪ್ರಸ್ತಾವನೆ ಸಲ್ಲಿಸುವ ಸಲುವಾಗಿ ಸದರಿ ನೇಮಕಾತಿ ಕುರಿತು 488 ಅಭ್ಯರ್ಥಿಗಳ ಕರೆಪತ್ರ ಸೇರಿದಂತೆ ಕೆಲವು ದಾಖಲಾತಿಗಳು ಲಭ್ಯವಾಗದ ಪ್ರಯುಕ್ತ ಎ.ಡಿ.ಜಿ.ಪಿ, ಕೆ.ಎಸ್.ಆರ್.ಪಿ ಕಛೇರಿಯಲ್ಲಿ ಸದರಿ ದಾಖಲಾತಿಗಳ ಕ್ರೋಡೀಕರಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ ಹಾಗೂ ಸದರಿ 488 ಅಭ್ಯರ್ಥಿಗಳ ದಾಖಲೆಗಳು ಲಭ್ಯವಾದ ಕೂಡಲೇ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. |
| ಆ) | ಈ ಪ್ರಕರಣದ ಸಂಬಂಧ ದಿನಾಂಕ: 22.03.2022 ರಂದು ಗೃಹ ಇಲಾಖೆಯ ಸಂಬಂಧಿತ ಉನ್ನತ ಅಧಿಕಾರಿಗಳ ಸಭೆಯಲ್ಲಿ ಕೈಗೊಂಡ ನಿರ್ಣಯವೇನು; ಹಾಗಿದ್ದಲ್ಲಿ, ನಿರ್ಣಯದ ಆಧಾರದ ಮೇಲೆ ಕ್ರಮ ಕೈಗೊಳ್ಳಲಾಗಿದೆಯೇ; (ಪ್ರತಿ ಒದಗಿಸುವುದು) ಇಲ್ಲವಾದಲ್ಲಿ ಯಾವಾಗ ಕ್ರಮ ಕೈಳ್ಳಲಾಗುವುದು? | |

HD/203/PPS/2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು